ಜಾನಪದದಾಗ ಏನಾಯ್ತು ಅಂತಂದ್ರ ಇಂಗ್ಲಿಷ್ ಸಿದ್ಧಾಂತ ಓದ್ಕೊಳ್ಳೋದು ಕನ್ನಡದಾಗ ಹೇಳೋದು. ಇಲ್ಲಿನ ವಾಸ್ತವಗಳೇ ಗೊತ್ತಿಲ್ಲ. ಇಲ್ಲಿನ ಜಾನಪದ ವೈವಿಧ್ಯ, ಸಂಕೀರ್ಣತೆ, ವಿಭಿನ್ನ ಲೋಕಗಳ ಫಸ್ಟ್ ಹ್ಯಾಂಡ್ ಮಾಹಿತಿ ಇಲ್ಲ.

◆ **ನಿಮಗೆ ಜನಪದ ಕಾವ್ಯಮೀಮಾಂಸೆ ಹುಡುಕಬೇಕು ಅಂತ ಯಾಕನ್ನಿಸ್ತು? ಕನ್ನಡದಲ್ಲಿ ಅಂಥ ಪ್ರಯತ್ನ ಮಾಡಿದವರಲ್ಲಿ ನೀವು ಮೊದಲಿಗರು. ನಾನು ಮಧುರಚೆನ್ನರ 'ರಮ್ಯ ಜೀವನ' ಓದಿದಾಗ ಅಲ್ಲೂ ಜನಪದ ಕಾವ್ಯಮೀಮಾಂಸೆಯ ಎಳೆಗಳು ಇವೆ. ಅಂದ್ರ ಒಬ್ಬ ಲಾವಣಿಕಾರ ಹೆಂಗ್ ರೂಪುಗೊಳ್ತಾನ, ಅವನ ತಾಲೀಮು ಹೆಂಗಿರ್ತದ, ಅವನ ಕಲ್ಪನೆಗಳು ಎಲ್ಲಿಂದ ಬರ್ತಾವ, ಸವಾಲು ಜವಾಬಿನಲ್ಲಿ ಯಾವುದು ತಪ್ಪು ಕ್ರಮ ಇತ್ಯಾದಿ ಚರ್ಚೆಗಳನ್ನ ಅವರು ಮಾಡಿದ್ದಾರೆ. ಇದೆಲ್ಲ ನೀವು ಗಮನಿಸಿದ್ರಿ ಅನ್ನಿಸ್ತದ.**

ಇರ್ತಾವ. ಮಧುರಚೆನ್ನರ ಲೇಖನದೊಳಗ ಅದ. ಅವರೆಲ್ಲ ಹಳ್ಳಿಯೊಳಗೆ ಇದ್ದಿಂದ್ರಿಂದ ಅದೆಲ್ಲ ಗೊತ್ತಿರ್ತದ. ಆದ್ರೆ ಅವರು ಅದನ್ನೆಲ್ಲ ಶಾಸ್ತ್ರೀಯ ಚೌಕಟ್ಟಿನೊಳಗ ಇಡಲಿಲ್ಲ. ನಾನೇನು ಕಾವ್ಯಮೀಮಾಂಸೆ ಬಗ್ಗೆ ಬರೆದೀನಿ ಅದರ ಉತ್ಕೃಷ್ಟ ಜ್ಞಾನವೆಲ್ಲ ನನಗ ಹಳ್ಳಿಯೊಳಗೆ ಸಿಕ್ತು. ನಾನು ಬೀದಿಬಯಲಾಟದ ಬಗ್ಗೆ ಬರದೆ. ಅದು ಸಲಗರದಲ್ಲಿ ನೋಡಿದೆ.

ಜಾನಪದ ಕಾವ್ಯಮೀಮಾಂಸೆಯ ವೈಶಿಷ್ಟ್ಯ ಏನು ಅಂದ್ರ, ನಮ್ಮೂರೊಳಗ ಇವೇನು ಹಾಡಿನ ಗುಂಪುಗಳು ಇದ್ದುವು ಈ ಮೋಹರಂ ಹಾಡುಗಳು, ಹಂತಿ ಹಾಡೋದು, ಕೋಲಾಟದೊಳಗ ಸಹಾಯ ಮಾಡೋದು, ಭಜನೆ ಹಾಡು ನೋಡೋದು ಇಂತವೆಲ್ಲ ಗೊತ್ತಿದ್ವು. ಹಿಂಗಾಗಿ ಅಲ್ಲಿ ಹಾಡಿನ ರಚನೆ ಹೆಂಗಾಗ್ತದ ಅನ್ನೋದು ಗೊತ್ತಿತ್ತು. ಅವರು ಹೇಳೋದು ಏನು ಅಂತ ಅಂದ್ರ ವಿಷಾಕ್ಷರಗಳನ್ನ ಹೆಚ್ಚು ಬಳಸಿದ್ರಿ ಅಂತಂದ್ರೆ ಹಾಡು ಮಾಡಿದವರಿಗೆ ಕಂಟಕ ಅಂತ. ಕವಿಗೆ ಕಂಟಕ ಅಂತ. ಅದಕ್ಕ ವಿಷ ಅಕ್ಷರಗಳು ಅಂತಾರ. ಇದನ್ನು ಮೊದಲು ಹೇಳಿದವರು ಲಕ್ಷ್ಮಣ ನಾಟೀಕಾರ್. ಅದರ ನಿಯಮಗಳೆಲ್ಲ ಬರದುಕೊಂಡೆ. ಒಂದು ವಿಷಾಕ್ಷರ ಕೂಡಿಸಿ, ಎರಡಕ್ಷರ ಕೂಡಿಸಿ ಪದ ಮಾಡಬಾರದು. ಅದರೊಳಗಂತೂ ಮೂರು ವಿಷಾಕ್ಷರಗಳನ್ನು ಕೂಡಿಸಿ ಮಾಡಲೇಬಾರದು. ಟಿ.ಎಸ್. ರಾಜಪ್ಪ, ಕ್ಯಾತನಹಳ್ಳಿ ರಾಮಣ್ಣ ಅವರು ಕೂಡ ತಮ್ಮ ಪ್ರಸ್ತಾವನೆಗಳಲ್ಲಿ ಕೆಲವೊಂದು ಅಕ್ಷರಗಳನ್ನು ಬಳಸಬಾರದೆಂಬ ನಂಬಿಕೆ ಇದೆ ಅಂತ ಬರದಾರ. ಅಂತ ಅಂದ್ರ ಈ ಕಲ್ಪನೆ ಎಲ್ಲ ಕಡೆ ಅದ ಅಂದಂಗಾತು. ಅವಾಗ ಏನು ಮಾಡಿದೆ, ಹಾಡಿನ ರಚನೆಗಳನ್ನ ಬರೀಲಿಕ್ಕೆ ಶುರುಮಾಡಿದೆ. ಈ ಪಲ್ಲ ಅಂದ್ರೇನು, ಸಾಲ ಅಂದ್ರೇನು, ಚರಣ ಅಂದ್ರೇನು, ಲಾವಾಣಿಯೊಳಗ ಕೂಡುಪಲ್ಲ ಬರ್ತಾವ ಕ್ಯಾಲಿ ಬರ್ತಾವ. ಆಮೇಲೆ ಉತಾಳಿ ನುಡಿಗಳು ಬರ್ತಾವ. ಈ ಸಣ್ಣ ಸಣ್ಣ ನುಡಿಗಳನ್ನು ಉತಾಳಿ ನುಡಿಗಳು ಅಂತಾರ. ಕೊನಿಗಿ ಕೂಡಪಲ್ಲ ಬರೋದು. ಲಾವಾಣಿ ಸ್ಟ್ರಕ್ಚರ್ ಹೆಂಗ್ ಇರ್ತದ ಅನ್ನೋದಕ್ಕ ಇವನ್ನೆಲ್ಲ ಸೇರಿಸಿ ಹತ್ತು ಹದಿನೈದು ಪೇಜ್ ಬರ್ದೆ. ಆಮೇಲೆ ಅದೇ ಬೆಳೆದು ಜನಪದ ಕಾವ್ಯಮೀಮಾಂಸೆ ಪುಸ್ತಕ ಆಯ್ತು. ಅದನ್ನು ಆರ್.ಕೆ. ಹುಡುಗಿ ಪ್ರಿಂಟ್ ಮಾಡಿದ್ರು.

◆ **ಇಂದಿನ ಜಾನಪದ ಅಧ್ಯಯನದಲ್ಲಿ ಯಾವ ಸಮಸ್ಯೆಗಳಿವೆ? ಹೊಸಬರು ಇವುಗಳನ್ನು ದಾಟೋದು ಹೇಗೆ?**

ಹಿಂದೆ ದೊಡ್ಡ ದೊಡ್ಡ ದಿಗ್ಗಜರು ಜಾನಪದದಲ್ಲಿ ತೊಡಗಿಸಿಕೊಂಡರು. ಜೀಶಂಪ ಅವರಂತೂ